ದಿನಾಂಕಃ 27-09-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್. ಹೆಚ್.ಜಿ ವಕೀಲರಿಂದಃ**

ನಾನು 7ನೇ ತರಗತಿ ವರೆಗೆ ಓದಿದ್ದೇನೆ. ನಾನು ಯಾದಗಿರಿಯಲ್ಲಿ ಜನಿಸಿರುತ್ತೇನೆ. ನನ್ನ ತಂದೆಯೂ ಸಹ ಯಾದಗಿರಿಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿ. ನನ್ನ ತಂದೆ ಯಾದಗಿರಿಯ ಶಾಂತಿ ನಗರದಲ್ಲಿ ಮರಣಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಅಂತ್ಯ ಕ್ರಿಯೆಯೂ ಸಹ ಯಾದಗಿರಿಯಲ್ಲಿಯೇ ಆಗಿದೆ ಎಂದರೆ ಸರಿ. ನನ್ನ ತಾಯಿಯೂ ಸಹ ತೀರಿಕೊಂಡಿದ್ದಾರೆ. ನನ್ನ ತಾಯಿಯ ಅಂತ್ಯ ಕ್ರಿಯೆಯೂ ಸಹ ಯಾದಗಿರಿಯಲ್ಲಿಯೇ ಆಗಿದೆ ಎಂದರೆ ಸರಿ. ನನ್ನ ತಂದೆಗೆ ನಾವು ವಾದಿಯರು ಮೂರು ಜನ ಮಕ್ಕಳಾಗಿರುತ್ತೇವೆ. ನನ್ನ ತಂದೆ 2014 ರಲ್ಲಿ ಮರಣಹೊಂದಿದ್ದಾರೆ. ನನ್ನ ತಾಯಿ ನಾನು ಕೇವಲ 09 ತಿಂಗಳು ಆಗಿದ್ದಾಗ 1996-97 ರಲ್ಲಿ ಮರಣಹೊಂದಿರುತ್ತಾರೆ. ನಾನು ಜನಿಸುವ ಪೂರ್ವದಿಂದಲೂ ನನ್ನ ತಂದೆ ಯಾದಗಿರಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ವಂಶವಳಿ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೇನೆ. ನಾನು ಆ ರೀತಿ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ನಂದೇಪಲ್ಲಿಯ ಯಾವುದೇ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ, ಹೇಗೆ ಗೊತ್ತಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆ ಹೋಗುವುದು-ಬರುವುದು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪ ಜಮೀನು ಸಾಗುವಳಿ ಮಾಡುತ್ತಿದ್ದು ನನ್ನ ತಂದೆ ಹೋಗಿ ನೋಡಿಕೊಂಡು ಬರುತ್ತಿದ್ದರು. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. ನನ್ನ ತಂದೆಗೆ ಒಬ್ಬ ಸಹೋದರಿ ಮಾತ್ರ ಇದ್ದಾರೆ. ನನ್ನ ಸೋದರ ಅತ್ತೆ ಈಗ ಮುಂಬೈಯಲ್ಲಿ ವಾಸವಾಗಿದ್ದಾರೆ. ನನ್ನ ತಂದೆಗೆ ಅಣ್ಣ-ತಮ್ಮಂದಿರು ಇಲ್ಲ. ನನ್ನ ತಂದೆಯ ತಂದೆ ಅಂದರೆ ಅಜ್ಜನ ಹೆಸರು ಬಾಲಪ್ಪ ಎಂದು ಇರುತ್ತಾರೆ. ನನ್ನ ಅಜ್ಜನಿಗೆ ದೊಡ್ಡ ಬಾಲಪ್ಪ ಎಂಬ ಒಬ್ಬ ಸಹೋದರ ಮಾತ್ರ ಇದ್ದರು. ಸದರಿ ದೊಡ್ಡ ಬಾಲಪ್ಪ

ರವರಿಗೆ ಮೂರು ಜನ ಹೆಣ್ಣು ಮಕ್ಕಳು ಇದ್ದಾರೆ, ಅವರಿಗೆ ಗಂಡು ಮಕ್ಕಳು ಇರುವುದಿಲ್ಲ. ನನ್ನ ಅಜ್ಜನ ಕುಟುಂಬದ ವಂಶಾವಳಿ ಪ್ರಮಾಣ ಪತ್ರವನ್ನು ನಾನು ಹಾಜರು ಮಾಡಿಲ್ಲ.

3. ನಿಮ್ಮ ಅಜ್ಜ ಬಾಲಪ್ಪ ಹಾಗೂ ಆತನ ಸಹೋದರ ದೊಡ್ಡ ಬಾಲಪ್ಪ ಎಷ್ಟು ಆಸ್ತಿ ಹೊಂದಿದ್ದರು ಎಂಬುದನ್ನು ತೋರಿಸಲು ಲಾವಣಿ ಪತ್ರ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಆದರೆ ಬೇರೆ ರೆಕಾರ್ಡ್ ಗಳನ್ನು ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.62/1 ಹಾಗೂ 65/4 ರೆಕಾರ್ಡ್ ಗಳನ್ನು ಹಾಜರು ಮಾಡಿದ್ದೇನೆ. ಮನೆ ಬಿದ್ದು ಹೋಗಿರುವುದರಿಂದ ಮನೆಯ ದಾಖಲೆಗಳನ್ನು ಹಾಜರು ಮಾಡಿಲ್ಲ. ಸರ್ವೆ ನಂ.62/1 ಹಾಗೂ 65/4 ಜಮೀನುಗಳು ನಮಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ಹಾಗೂ ಆತನ ಸಹೋದರ ತೀರಿಕೊಂಡಿದ್ದಾರೆ. ಅವರುಗಳು 1978-79 ರಲ್ಲಿ ಮರಣಹೊಂದಿದ್ದಾರೆ. ನಾನು ಅವರ ಮರಣ ಪ್ರಮಾಣ ಪತ್ರಗಳನ್ನು ಹಾಜರು ಮಾಡಿಲ್ಲ. ನನ್ನ ಅಜ್ಜ ಹಾಗೂ ಆತನ ಸಹೋದರ ಯಾವಾಗ ಮರಣಹೊಂದಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸರ್ವೆ ನಂ.62/1 ಹಾಗೂ 65/4 ರ ಜಮೀನುಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಇಲ್ಲ. ಸರ್ವೆ ನಂ.62/1 ರಲ್ಲಿ 03 ಎಕರೆ 24 ಗುಂಟೆ ಜಮೀನು ಇದೆ. ನಿಜಾಮರ ಕಾಲದಲ್ಲಿ ಸದರಿ ಜಮೀನಿನಲ್ಲಿ 01 ಎಕರೆ 11 ಗುಂಟೆ ಕ್ಷೇತ್ರದಲ್ಲಿ ರಸ್ತೆ ಹಾದು ಹೋಗಿದ್ದು ಸದರಿ ರಸ್ತೆ ಕ್ಷೇತ್ರ ಹೊರತು ಪಡಿಸಿ 03 ಎಕರೆ 24 ಗುಂಟೆ ಜಮೀನು ಇರುತ್ತದೆ. ರಸ್ತೆ ಇರುವುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಹಾಜರು ಮಾಡಿರುವ ದಾಖಲಾತಿಗಳಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ನಿಪಿ-2ರ ಪಹಣಿ ಪತ್ರಿಕೆಯಲ್ಲಿ 03 ಎಕರೆ 24 ಗುಂಟೆ ಜಮೀನಿನಲ್ಲಿಯೇ 01 ಎಕರೆ 11 ಗುಂಟೆ ಆಸ್ತಿ ರಸ್ತೆಗೆ ಹೋಗಿರುತ್ತದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ರಸ್ತೆಗೆ ಸಂಬಂದಿಸಿದಂತೆ ನೀಡಿದ ಭೂ ಸ್ವಾದೀನ ಪರಿಹಾರದ ಹಣವನ್ನು ಯಾರು ಪಡೆದುಕೊಂಡಿದ್ದಾರೆ ಎಂಬುದನ್ನು ತೋರಿಸಲು ನಾನು ದಾಖಲೆ ಹಾಜರು ಮಾಡಿಲ್ಲ, ಆದರೆ ನನ್ನ ಅಜ್ಜ ಪಡೆದುಕೊಂಡಿರಬಹುದು. ನನ್ನ ಅಜ್ಜ ಪರಿಹಾರದ ಹಣ ಪಡೆದುಕೊಂಡಿರಬಹುದು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ಸರ್ವೆ ನಂ.62/1 ರ 03 ಎಕರೆ 24 ಗುಂಟೆ ಜಮೀನಿನ ಪೂರ್ವಕ್ಕೆ ಶಿವಪ್ಪ ತಂದೆ ನರಸಪ್ಪ ರವರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆ ಹಳ್ಳ ಇದೆ. ರಸ್ತೆಗೆ ಹೋಗಿರುವ 01 ಎಕರೆ 11 ಗುಂಟೆ ಜಮೀನಿನ ಚೆಕ್ ಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ. 65/4 ರಲ್ಲಿ 24 ಗುಂಟೆ ಜಮೀನಿದೆ ಆದರೆ ನನಗೆ ಅದರ ಚೆಕ್ ಬಂದಿ ಗೊತ್ತಿಲ್ಲ.

5. ನನ್ನ ಅಜ್ಜ ಬಾಲಪ್ಪನ ಕುಟುಂಬದ ಅಡ್ಡ ಹೆಸರ ಮೆಣಸಿನ ಎಂದು ಇರುತ್ತದೆ. ನಮ್ಮ ಹಾಗೂ ನನ್ನ ತಂದೆಯ ಯಾವುದೇ ದಾಖಲೆಗಳಲ್ಲಿ ಅಡ್ಡ ಹೆಸರು ಮೆಣಸಿನ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಸರಿಯಲ್ಲ, ಎಲ್ಲಾ ದಾಖಲೆಗಳಲ್ಲಿಯೂ ಅದೇ ಅಡ್ಡ ಹೆಸರು ನಮೂದು ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-57 ರ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿ ಮೆಣಸಿನ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ನಮಗೆ ಯಾದರಿಯಲ್ಲಿ ನಂದಳ್ಳಿ ಎಂದಬ ಅಡ್ಡ ಹೆಸರಿನಿಂದ ಹಾಗೂ ಗ್ರಾಮದಲ್ಲಿ ಮೆಣಸಿನ ಎಂಬ ಅಡ್ಡ ಹೆಸರಿನಿಂದ ಕರೆಯುತ್ತಾರೆ ಎಂದು ನುಡಿಯುತ್ತಾರೆ. ನಿಪಿ-56ರ ವಂಶವೃಕ್ಷದ ದೃಡೀಕರಣ ಪತ್ರದಲ್ಲಿಯೂ ಸಹ ಮೆಣಸಿನ ಎಂದು ನಮೂದು ಇಲ್ಲ ಎಂದರೆ ಸರಿ.

6. ನಿಮ್ಮ ತಾತ ಹಾಗೂ ನೀಲಕಂಠಪ್ಪ ಎಂಬಾತ ಸೇರಿಕೊಂಡು ದಾವಾ ಜಮೀನನ್ನು 1ನೇ ಪ್ರತಿವಾದಿಯ ಗಂಡ ಮಾಣಿಕಪ್ಪ ರವರಿಗೆ 13.07.1981 ರಂದು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ತಪ್ಪು, ನನ್ನ ತಾತ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರಕ್ಕೆ ನಿಮ್ಮ ತಾತ ಬಾಲಪ್ಪ ಹಾಗೂ ಇನ್ನೊಬ್ಬ ಸಾಯಿಬಣ್ಣ ತಂದೆ ಶಂಕ್ರಪ್ಪ ಎಂಬಾತ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸಾಕ್ಷಿಯು ತಪ್ಪು, ನನ್ನ ತಾತ 1974 ರಲ್ಲಿಯೇ ಮರಣಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ಸಮಯದಲ್ಲಿ ನನ್ನ ತಾತ ಜೀವಂತವಾಗಿದ್ದರು ಎಂದರೆ ಸರಿಯಲ್ಲ. ನಾನು ನನ್ನ ತಾತನ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿಲ್ಲ. ನೀಲಕಂಠಪ್ಪ ಎಂಬಾತ ಖರೀದಿ ಪತ್ರಕ್ಕೆ ಮಾರಾಟಗಾರನಾಗಿ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಆತ ನಮ್ಮ ಕುಟುಂಬಕ್ಕೆ ಸಂಬಂಧಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತ ಜಮೀನನ್ನು ಸದರಿ ನೀಲಕಂಠಪ್ಪನ ಹೆಸರಿಗೆ ವರ್ಗಾವಣೆ ಮಾಡಿಸಿ ಆತನಿಂದ ಖರೀದಿ ಪತ್ರ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1981 ರಲ್ಲಿ

ನಾನು ಜನಿಸಿರಲಿಲ್ಲ ಎಂದರೆ ಸರಿ. ಹಾಗಾಗಿ ನಿಮಗೆ ಸದರಿ ವ್ಯವಹಾರದ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನ್ನ ತಂದೆಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಸದರಿ ವ್ಯವಹಾರವನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಪ್ರಶ್ನೆ ಮಾಡಿದಾಗ ಅವರ ಮೇಲೆ ದಬ್ಬಾಳಿಕೆ ಮಾಡಿ ಅವರನ್ನು ಹೊಡೆದು ಕಳುಹಿಸಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಆ ಬಗ್ಗೆ ದೂರು ದಾಖಲು ಮಾಡಿಲ್ಲ. ನನ್ನ ತಂದೆ-ತಾಯಿ ಅಥವಾ ನನ್ನ ಅಕ್ಕಂದಿರು ನೀಲಕಂಠಪ್ಪ ಮತ್ತು 1ನೇ ಪ್ರತಿವಾದಿಯ ಗಂಡನ ಹೆಸರಿಗೆ ಆಗಿರುವ ಹಕ್ಕು ಬದಲಾವಣೆಗಳನ್ನು ಪ್ರಶ್ನೆ ಮಾಡಿ ದಾವೆ ದಾಖಲು ಮಾಡಿರಲಿಲ್ಲ. 1974 ರಲ್ಲಿ ನೀಲಕಂಠಪ್ಪನ ಹೆಸರಿಗೆ ಖಾತಾ ವರ್ಗಾವಣೆ ಆದ 10 ವರ್ಷಗಳ ನಂತರ ಆತ ಹಾಗೂ ನನ್ನ ತಾತ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರವಾದ 38 ವರ್ಷಗಳ ನಂತರ ನೀವು ದಾವೆ ದಾಖಲು ಮಾಡಿರುವುದರಿಂದ ದಾವೆ ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡದೇ ಸುಮ್ಮನೆ ನಿಂತಿರುತ್ತಾರೆ. 1981 ರಿಂದ ಈವರೆಗೆ ಪಹಣಿ ಪತ್ರಿಕೆಗಳು ಮಾಣಿಕಪ್ಪ ಮತ್ತು ಅತನ ಕುಟುಂಬದವರ ಹೆಸರಿನಲ್ಲಿ ಇದ್ದಾವೆ ಎದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಈಗಾಗಲೆ ಸಾಕಷ್ಟು ಸಮಯ ನೀಡಿರುವುದಲ್ಲದೆ ದಾವೆ 08 ವರ್ಷ ಹಳೆಯದಾಗಿರುವುದರಿಂದ ಸಮಯ ನಿರಾಕರಿಸಿ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.)

**ಮರು ವಿಚಾರಣೆಃ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ